ಕೊಡುತ್ತಿದ್ದೇವೆ, ಅಮೇಲೆ ಅಥಣಿಯಲ್ಲಿ ರಾಜ್ಯಗೃಹ ಇದೆ. ೧೮ ರಿಂದ ೩೫ ವರ್ಷದವರಿಗೆ ವಸತಿಸೌಲಭ್ಯ ಮತ್ತು ವೃತ್ತಿಪರ ತರಬೇತಿಯನ್ನು ಕೊಡುತ್ತಿದ್ದೇವೆ. ಈ ಕಾರ್ಯಕ್ರಮವನ್ನು ಹೆಚ್ಚಿಗ ಮಾಡಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯ ಇದೆ. ಸರ್ಕಾರ ಅದರ ಬಗ್ಗೆ ಹೆಚ್ಚಿನ ಗಮನ ಹರಿಸಿದೆ. ಈ ವರ್ಷ ಇನ್ನೂ ಕೆಲವು ಕಡೆ ಮಾಡಬೇಕೆಂದು ಮಾಡಿದ್ದೇವೆ, ಈಗ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಇದು ಕಡಿಮೆ ಎಂದು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಈ ಕಾರ್ಯಕ್ರಮದ ಜೊತೆಗೆ ವಿವಿಧ ಕಾರ್ಯಕ್ರಮಗಳು, ಜನತಾ ಮನೆ, ಭಾಗ್ಯ ಜ್ಯೋತಿ, ಐ. ಆರ್. ಡಿ. ಪಿ. ವೃದ್ಧಾಪ್ಯವೇತನ ಇತ್ಯಾದಿ ಅನೇಕ ಕಾರ್ಯಕ್ರಮಗಳನ್ನು ಸಹ ಸೇರಿಸಿದ್ದೇನೆ.ಇದಕ್ಕೆಲ್ಲ ಸಹ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ಖರ್ಚುಮಾಡುತ್ತದೆ.ಈ ದೇವದಾಸಿ ಪದ್ಧತಿ ಅನಿಷ್ಟ ಪದ್ಧತಿ ಇದನ್ನು ಹೋಗಲಾಡಿಸುವುದಕ್ಕೆ ಉಗ್ರವಾದ ಶಾಸನವನ್ನು ತಂದಿದ್ದೇವೆ. ತಿದ್ದುಪಡಿಯಾದ ಶಾಸನ ೮೪ರಿಂದ ಬಂದಿದೆ. ಈಶಾಸನದ ಪ್ರಕಾರ ದೇವದಾಸಿ ಪದ್ಧತಿ ಆಚರಣೆ ಕಾನೂನು ಬಾಹಿರ ಮತ್ತು ಅದು ಶಿಕ್ಷಾರ್ಹ. ಇಂತಹ ಪ್ರಕರಣಗಳಲ್ಲಿ ಭಾಗಿಯಾಗಲೂ ಪ್ರೇರೇಪಿಸಿದವರಿಗೆ ಮೂರು ವರ್ಷ ಜೈಲು ಮತ್ತು ಎರಡು ಸಾವಿರ ರೂಪಾಯಿ ದಂಡ ಎಂದು ಇದೆ. ಇದನ್ನು ಕಠಿಣವಾಗಿ ಆಚರಣೆಗೆ ತರುತ್ತಿದ್ದೇವೆ. ಸಂಬಂಧಿಕರು ಮತ್ತು ತಂದೆತಾಯಿಗಳು ಇದಕ್ಕೆ ಭಾಗ ವಹಿಸಿದರೆ ಐದು ಸಾವಿರ ರೂಪಾಯಿ ದಂಡ ಮತ್ತು ಐದು ವರ್ಷ ಜೈಲು ವಿಧಿಸುವ ಕಾರ್ಯ ಕ್ರಮ ಕೈಗೊಂಡಿದ್ದೇವೆ. ಆದ್ದರಿಂದ ಈ ರೀತಿ ತಮ್ಮ ಕಳಕಳಿ ಏನಿದೆ, ಅವರಿಗೆ ಹೆಚ್ಚಿನ ಪ್ರೋತ್ಸಾಹ, ಸಹಾಯ ದೊರೆಯಬೇಕು ಎಂಬುದು. ಸರ್ಕಾರಕ್ಕೂ ಸಹ ಇವರ ಬಗ್ಗೆ ಅಷ್ಟೇ ಕಳಕಳಿಯಿದೆ. ಸಧ್ಯದಲ್ಲೇ ''ವುಮನ್ ಡೆವಲಪ್‌ಮೆಂಟ್ ಕಾರ್ಪೊರೇಷನ್'' ಅಸ್ತಿತ್ವಕ್ಕೆ ಬರಲಿದ್ದು ಇವರ ಸಂಪೂರ್ಣ ಜವಾಬ್ದಾರಿಯನ್ನು ಅವರು ವಹಿಸುತ್ತಾರೆ.

ಸರ್ಕಾರದಿಂದ ಪ್ರಾಥಮಿಕ ಸಹಕಾರ ಸಂಘಗಳಿಗೆ ಬಡ್ಡಿ ರಿಯಾಯಿತಿ ಮೂಲಕ ಬರಬೇಕಾದ ಬಾಕಿ ಹಣದ ಬಗ್ಗೆ

೨೩೧೭. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬–೮೭ ಮತ್ತು ೧೯೮೭–೮೮ ನೇ ಸಾಲಿನಲ್ಲಿ ಸರ್ಕಾರದಿಂದ ಪ್ರಾಥಮಿಕ ಸಹಕಾರ ಸಂಘಗಳಿಗೆ ಬಡ್ಡಿ ರಿಯಾಯಿತಿ ಮೂಲಕ ಬರಬೇಕಾದ ಬಾಕಿ ಹಣವೆಷ್ಟು?

ಆ) ಈ ಹಣವನ್ನು ಯಾವಾಗ ಪಾವತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥಯ್ಯ (ಸಹಕಾರ ಸಚಿವರು).—

ಅ) ೧೯೮೬-೮೭ನೇ ಸಾಲಿಗಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ರೂ. ೪೨೧.೧೯ ಲಕ್ಷಗಳ ಸಹಾಯ ಧನದ ಮೊತ್ತಕ್ಕೆ ಬೇಡಿಕೆ ಬಂದಿದೆ. ೧೯೮೭–೮೮ನೇ ಸಾಲಿನ ಚಾಲ್ತಿ ಸಾಲಗಳ ವಸೂಲಾತಿಯ ಕಾರ್ಯವು ೩೦–೬–೮೮ರವರೆಗೆ ನಡೆಯುವುದಿದ್ದು ಬಡ್ಡಿ ಸಹಾಯಧನದ ಮಾಹಿತಿ ಇನ್ನೂ ಲಭ್ಯವಿಲ್ಲ.

ಆ) ಬಡ್ಡಿ ರಿಯಾಯಿತಿ ಧನವನ್ನು ಆದಷ್ಟು ಬೇಗ ಸಹಕಾರಿ ಸಂಸ್ಥೆಗಳಿಗೆ ತುಂಬಿಕೊಡುವುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಈ 'ಆದಷ್ಟು ಬೇಗ' ಎಂದರೆ ಇದರ ಮಿತಿ ಎಷ್ಟು ಎಂಬುದನ್ನು ದಯವಿಟ್ಟು ಅವರು ತಿಳಿಸಬೇಕು. ಬಡ್ಡಿ ರಿಯಾಯಿತಿ ಪಾವತಿಗೆ ಒಂದು ವರ್ಷ, ಎರಡು ವರ್ಷ ತಡವಾದರೆ ಪ್ರಾಥಮಿಕ ಸಹಕಾರಸಂಘಗಳ ಗತಿ ಏನು? ೧೯೮೭–೮೮ರ ವಸೂಲಿಯಲ್ಲಿ ಡಿ. ಸಿ. ಸಿ. ಬ್ಯಾಂಕ್‌ಗೆ ಪ್ರಾಥಮಿಕ ಸಂಘಗಳು ಬಡ್ಡಿ ಕೊಡಬಾರದೆಂದು ಆದೇಶ ಇದೆ ಆದರೆ ಡಿ. ಸಿ. ಸಿ. ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕ್‌ಗೆ ಕೊಡಬೇಕು ಅಪೆಕ್ಸ್ ಬ್ಯಾಂಕ್‌ನವರಂ ನಬಾರ್ಡಿಗೆ ಕೊಡಬೇಕು, ಇದರಿಂದಾಗಿ ಸಹಕಾರ ಸಂಘಗಳ ಮೇಲೆ ಆಗುವ ದುಷ್ಪರಿಣಾಮವನ್ನು ನಿವಾರಿಸಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಎಚ್. ವಿಶ್ವನಾಥಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ೮೫ ಮತ್ತು ೮೬ನೇ ಸಾಲಿಗೆ ಸಂಬಂಧಪಟ್ಟ ಬಡ್ಡಿ ರಿಯಾಯ್ತಿಯನ್ನು ಪಾವತಿ ಮಾಡಿದ್ದೇವೆ. ೮೬-೮೭ನೇ ಸಾಲಿಗೆ ಭಾಗಶಃ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದರು ಏನೆಂದರೆ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳು ಮತ್ತು ಅದಕ್ಕೆ ಮೇಲ್ಪಟ್ಟ ಸಹಕಾರ ಸಂಘಗಳು ಈ ಬಡ್ಡಿ ರಿಯಾಯ್ತಿ ಹೊರಯನ್ನು ಹೊರುವುದಕ್ಕೆ ಸಾಧ್ಯವಿಲ್ಲವೆಂದರೆ ಪ್ರಾಥಮಿಕ ಸಹಕಾರ ಸಂಘಗಳಿಗೂ ಸಾಧ್ಯವಿಲ್ಲ. ಇದ್ದುದರಲ್ಲಿ ಅವರ ಪರಿಸ್ಥಿತಿ ಚೆನ್ನಾಗಿ ಇರುವುದರಿಂದ ೮೭-೮೮ರದ್ದು ಅವರೇ ಅದನ್ನು ಭರಿಸಬೇಕು ಎಂಬ ಸೂಚನೆಯನ್ನು ಕೊಡುತ್ತೇನೆ.

ಸರ್ಕಾರಿ ಸ್ಥಳಗಳನ್ನು ಸೂಳ್ಯ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯವರು ಅನುಭವಿಸುತ್ತಿರುವ ವಿಚಾರ

೧೪೬೨. ಕೆ. ಕುಶಾಲ (ಸೂಳ್ಯ).—ಮಾನ್ಯ ಕಂದಾಯ, ಯೋಜನಾ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೂಳ್ಯ ತಾಲ್ಲೂಕಿನಲ್ಲಿ ಸರಕಾರಿ ಜಮೀನನ್ನು ಆಗ್ಮೆ ಮಾಡಿ ಅನುಭವಿಸಿಕೊಂಡು ಬರುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಖ್ಯೆ ಎಷ್ಟು ?

ಆ) ಸದ್ರಿ ಆಗ್ಮೆದಾರರುಗಳ ಪೈಕಿ ಇಲಾಖೆ ಗ್ರಾಮವಾರು ರಿಕಾರ್ಡು ತಯಾರಿಸಿದ ಪ್ರಕರಣಗಳೆಷ್ಟು ? ಬಾಕಿ ಇರುವ ಪ್ರಕರಣಗಳೆಷ್ಟು ? ಬಾಕಿ ಇರಲು ಕಾರಣಗಳೇನು ?

ಇ) ೧೯೮೬ರಲ್ಲಿ ಸೂಳ್ಯ ತಾಲ್ಲೂಕಿನಾದ್ಯಂತ ಆಗ್ಮೆದಾರರ ಸಮ್ಮೇಳನದಂತೆ ಕಂದಾಯ ಸಚಿವರಿಗೆ ಸಲ್ಲಿಸಿದ ಮನವಿಯಂತೆ ಆಗ್ಮೆದಾರರ ಸಂಖ್ಯೆ ಎಷ್ಟು ? ರಿಕಾರ್ಡು ತಯಾರಿಸಲು ಇನ್ನು ಬಾಕಿಯಿರುವ ಪ್ರಕರಣಗಳೆಷ್ಟು ? ಈ ಕಾರಿತು ಸಂಪೂರ್ಣ ರಿಕಾರ್ಡು ತಯಾರಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಜೊಮ್ಮಾಯಿ (ಕಂದಾಯ, ಯೋಜನಾ ಮತ್ತು ಮಧ್ಯಮ ನೀರಾವರಿ ಸಚಿವರು).—

ಅ) ಸೂಳ್ಯ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಆಗ್ಮೆ ಮಾಡಿದ (ಅತಿಕ್ರಮಣ ಮಾಡಿದ) ಪರಿಶಿಷ್ಟ ಜಾತಿ ಸಂಖ್ಯೆ ೫೩೭ ಮತ್ತು ಪರಿಶಿಷ್ಟ ಪಂಗಡ ಸಂಖ್ಯೆ-೨೯೪.

ಆ) ೮೩೦ ಪ್ರಕರಣಗಳಲ್ಲಿ ರಿಕಾರ್ಡು ತಯಾರಿಸಲಾಗಿದೆ. ರಿಕಾರ್ಡು ತಯಾರಿಸಲು ಯಾವುದೇ ಪ್ರಕರಣಗಳು ಬಾಕಿಯಿರುವುದಿಲ್ಲ.

ಇ) ಆಗ್ಮೆದಾರರ (ಅತಿಕ್ರಮಣ) ಸಂಖ್ಯೆ ೭೫೪. ಸದ್ರಿ ಮನವಿಯಲ್ಲಿ ಹೇಳಿದ ಎಲ್ಲಾ ಪ್ರಕರಣಗಳಲ್ಲಿ ರಿಕಾರ್ಡು ತಯಾರಿಸಲಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ.—ಅಧ್ಯಕ್ಷರೇ, 'ಇ' ಪ್ರಶ್ನೆಗೆ ಉತ್ತರ ಸಮರ್ಪಕ ಇಲ್ಲ, ತಮಗೆ ಗೊತ್ತಿರುವಂತೆ ಎರಡು ಸಾವಿರಕ್ಕೂ ಮಿಕ್ಕ ಅತಿಕ್ರಮಣದಾರರು ತಮ್ಮ ನಾಯಕರ ಮುಖಾಂತರ ತಮ್ಮ ಕಛೇರಿಯಲ್ಲಿ ಮನವಿಯನ್ನು ಸಲ್ಲಿಸಿದ್ದಾರೆ. ನಾನು 'ಇ' ಪ್ರಶ್ನೆಯಲ್ಲಿ ಹಿಂದುಳಿದ ವರ್ಗದವರ ರಿಕಾರ್ಡುಗಳನ್ನು ಎಷ್ಟು ತಯಾರಿಸಲು ಬಾಕಿ ಇವೆ ಎಂದು ಕೇಳಿದ್ದೆ. ಅದಕ್ಕೆ ಉತ್ತರವಾಗಿ ೭೫೪ ಎಂದು ಹೇಳಿದ್ದಾರೆ. ನಿಜವಾಗಿಯೂ ೨ ಸಾವಿರಕ್ಕೂ ಹೆಚ್ಚು ಮನವಿದಾರರು ತಮಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಈಗ ೮೩೦ ಪ್ರಕರಣಗಳಲ್ಲಿ ರಿಕಾರ್ಡುಗಳನ್ನು ತಯಾರಿಸಲಾಗಿದೆ ಎಂದರೆ ಇನ್ನು ೧೩೦೦ ಪ್ರಕರಣಗಳು ಬಾಕಿ ಇವೆ ಎಂದಾಯಿತ . ಇದರಲ್ಲಿ ತಮ್ಮ ಮೂಲಕ ಜಿಲ್ಲಾಧಿಕಾರಿ ಕಛೇರಿಗೆ, ತಾಲ್ಲೂಕು ಕಛೇರಿಗೆ ಹೋಗಿ ಆ ಮೇಲೆ ಗ್ರಾಮಕರಣಿಕರ ಕಚೇರಿಗಳಲ್ಲಿ ಹೋಗಿ ರೆಕಾರ್ಡ್‌ಗಳನ್ನು ತೆಗೆಸಲಿಕ್ಕೆ ಬಾಕಿ ಇದೆ. ಕೆಲವು ಶ್ರೀಮಂತ ವರ್ಗದ ಜನರು ಈ ರೆಕಾರ್ಡುಗಳನ್ನು ತೆಗೆಸಲಿಕ್ಕೆ ಬಿಡದೇ ಇರುವುದರಿಂದ ಗ್ರಾಮಕರಣಿಕರ ಕಚೇರಿಯಲ್ಲಿ ಬಡರೈತರು ಅಲೆದಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.